† SRI N. HUTCHAMASTHY GOWDA.—That information is not available with me. The Question that was put about the number of cases pending on 31st December 1975, and I have been able to give that information. I do not know since how long these cases have been kept pending.

3-00 P M.

ಯಲ್ಬುರ್ಗ ತಾಲೂಕಿನಲ್ಲಿ ಭಾರಿ ಹಾಗೂ ಮಧ್ಯಮ ದರ್ಜೆಯ ಸೇತುವೆಗಳನ್ನು ನಿರ್ಮಿಸುವುದು

875. ಶ್ರೀ ಪ್ರಭುರಾಜ್ ಪಾಟೀಲ್ (ಯಲ್ಬುರ್ಗ).—ಲೋಕೋಪಯೋಗಿ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ

(ಅ) ರಾಯಚೂರ ಜಿಲ್ಲೆಯ ಯಲ್ಬುರ್ಗ ತಾಲೂಕಿನಲ್ಲಿ ರಚಿಸಬೇಕಾಗಿರುವ ಪ್ರಮುಖ ಮತ್ತು ಮಧ್ಯಮ ತರಗತಿಯ ಸೇತುವೆಗಳೆಷ್ಟು;

(ಆ) ಅವುಗಳನ್ನು ಪೂರ್ತಿಗೊಳಿಸಲು ಸರಕಾರ ಕೈಗೊಂಡಿರುವ ಯೋಜನೆಗಳೇನು?

ಶ್ರೀ ಎಸ್.ಬಿ. ನಾಗರಾಳ್ (ಸಣ್ಣ ನೀರಾವರಿ ಶಾಖೆಯ ರಾಜ್ಯ ಮಂತ್ರಿಗಳು.)

ಶ್ರೀ ಎಚ್.ಎಂ. ಚನ್ನಬಸಪ್ಪ (ಲೋಕೋಪಯೋಗಿ ಮಂತ್ರಿಗಳ ಪರವಾಗಿ).—

(ಅ) (1) 100 ಅಡಿ ಹಾಗೂ ಮೇಲ್ಪಟ್ಟಿನ ಒಂದೇ ಅಗಲವುಳ್ಳ ಜಲಮಾರ್ಗದ ಸುಮಾರು 14 ಭಾರೀ ಸೇತುವೆಗಳು. (2) 20 ಅಡಿಗೂ ಹೆಚ್ಚಿನ ಹಾಗೂ 100 ಅಡಿಗಳಿಗಿಂತ ಕಡಿಮೆ ಯಿರುವ ಒಂದೇ ಅಗಲವುಳ್ಳ ಜಲಮಾರ್ಗದ ಸುಮಾರು 75 ಮಧ್ಯಮ ದರ್ಜೆಯ ಸೇತುವೆಗಳು.

(ಆ) 537 ಡಿ. ಕರ್ನಾಟಕ ರಾಜ್ಯದ ರಸ್ತೆಗಳು ಹಾಗೂ ಸೇತುವೆಗಳ ನಿಧಿಯ ಬಾಬಿನ ಮೇರೆಗೆ ಇದನ್ನು ಕೈಕೊಂಡು ಹಂತ ಹಂತದ ಕಾರ್ಯಕ್ರಮದ ಮೇರೆಗೆ ಪೂರ್ತಿಗೊಳಿಸಲಾಗುವುದು.

ಶ್ರೀ ಪ್ರಭುರಾಜ್ ಪಾಟೀಲ್.—ಸ್ವಾಮಿ, ಇದರಲ್ಲಿ ಮುಧೋಳ್ ಹಳ್ಳಕ್ಕೆ ಕಟ್ಟುವ ಸೇತುವೆ ನಿರ್ಮಾಣ ಎಲ್ಲಿಯವರೆಗೆ ಬಂದಿದೆ ಅನ್ನುವುದನ್ನು ಹೇಳುತ್ತೀರಾ?

ಶ್ರೀ ಎಸ್.ಬಿ. ನಾಗರಾಳ್.—ಮಾನ್ಯ ಸದಸ್ಯರು ರಾಯಚೂರು ಜಿಲ್ಲೆಯ ಯಲ್ಬುರ್ಗ ತಾಲ್ಲೂಕಿನಲ್ಲಿ ರಚಿಸಬೇಕಾಗಿರುವ ಪ್ರಮುಖ ಮತ್ತು ಮಧ್ಯಮ ತರಗತಿಯ ಸೇತುವೆಗಳೆಷ್ಟು ಎಂದು ಕೇಳಿದ್ದಾರೆ ಅದಕ್ಕೆ ಉತ್ತರವಾಗಿ ಸುಮಾರು 14 ಭಾರಿ ಸೇತುವೆಗಳು ಮತ್ತು ಸುಮಾರು 75 ಮಧ್ಯಮ ದರ್ಜೆಯ ಸೇತುವೆಗಳು ಕಾರ್ಯಗತವಾಗತಕ್ಕದ್ದಾಗಿದ್ದು ಇವೆ ಎನ್ನುವುದನ್ನು ಹೇಳಿದ್ದೇನೆ. ಅದರಲ್ಲಿ ಕೆಲವು ಸ್ಕೆಮಿಕ್ಸ್ ಆಗಿವೆ, ಇನ್ನು ಕೆಲವಕ್ಕೆ ಅಂದಾಜು ಆಗಿದೆ. ಅವುಗಳಿಗೆ ಸಾಮಾನ್ಯವಾಗಿ ಆದ್ಯತೆ ಕೊಡಬೇಕು ಎಂಬುದನ್ನು ಸರ್ಕಾರದವರು ಪರಿಶೀಲನೆ ಮಾಡಿ, ಆದ್ಯತೆ ಮೇರೆ ಅಂಥಾ ಸೇತುವೆಯ ಕಾರ್ಯಕ್ರಮ ತೆಗೆದುಕೊಳ್ಳುವ ವ್ಯವಸ್ಥೆ ಮಾಡುತ್ತೇವೆ.

Bus Service from Kushtagi to Bangalore

823. SRI KANTHA RAO BHIMA RAO DESAI (Kushtagi).—Will the Minister for Transport and Tourism be pleased to state.—

(a) Whether Government are aware that many representations have been made to Government to start a direct bus service from Kushtagi to Bangalore;